ಕೊಡಗು.

ನೋಟೀಸ್.

ಮಡಿಕೆರೆ ತಾರೀಖು 4ನೇ ಡಿಶಂಬರ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ರ್ 1885ನೇ ಜನವರಿ ತಾರೀಖು 1ರಿಂದ ಕೊಡಗು ಫಾರೆಸ್ಟುಗಳಲ್ಲಿ ಬಿದರುಗಳನ್ನು ಬಂದು ಸಾವಿರಕ್ಕೆ 7—8—0 ಮೇರೆ ಮೂರುತ್ತೇವೆ, ಕೊಂಡುಕೊಳ್ಳುವವರು ಬಿದರುಗಳನ್ನು ತಾವೇ ಕಡಿದುಕೊಳ್ಳಬೇಕು.

ಬಿದರುಗಳು ಬೇಕಾದವರು ಫ್ರೈಜರ್‌ಪೇಟೆ, ಮೂಲ್ಕಾರೆ, ಮತ್ತು ತಿತಿಮತಿಯಲ್ಲು ಯಿರುವ ಫಾರೆಸ್ಟರಿವರಿಗೆ ದರಖಾಸ್ತು ಮಾಡಿಕೊಳ್ಳತಕ್ಕದ್ದು.

ಎಫ್. ಬಿ. ಡಿರ್ಕಸ್ರ್,
ಡೆಪ್ಯೂಟಿ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್.

ಸ್ರ್ 1884ನೇ ಇಸವಿ ನವಂಬರ್ ತಿಂಗಳ ಕಾಲಸ್ಥಿತಿ ರಿಪ್ಪೋರ್ಟುಗಳು.

ಶಿವಮೊಗ್ಗ ಡಿಸ್ಟ್ರಿಕ್ಟ್.

ಮಳೆ—ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಇದರಡಿ ಕಂಡಂತೆ ಮಳೆ ಅಳೆಯಲ್ಪಟ್ಟಿರುತ್ತೆ:—

	ಇಂ.	ಸೆಂ.		ಇಂ.	ಸೆಂ.
ಶಿವಮೊಗ್ಗ ..	1	55	ನಗರ ..	0	15
ಚನ್ನಗಿರಿ ..	0	18	ತೀರ್ಥಹಳ್ಳಿ ..	1	65
ಹೊನ್ನಾಳಿ ..	2	10	ದಾವಣಗೆರೆ ..	0	60
ಷಿಕಾರಿಪುರ ..	1	15			
ಸಾಗರ ..	0	15			

ಪೇರಾವಾದ ಬೀಜಗಳು—ಕಡಲೆ, ಜವರೀ, ಭತ್ತ, ಉದ್ದು, ಹೆಸರು. ಅರಳೆ. ಫಸಲ್ ಸ್ಥಿತಿ, ದಾವಣಗೆರೆ ಶಿವಾಯಿ ಡಿಸ್ಟ್ರಿಕ್ಟ್ ಮುಳಿ ದರೋಟಸ್ತು ತಾಲ್ಲೂಕುಗಳಲ್ಲಿಯೂ ಫಸಲಿನಳ್ಳೀ ಸ್ಥಿತಿಯಲ್ಲಿರುವಂತೆ ರಿಪ್ಪೋರ್ಟಾಗಿರುತ್ತೆ. ಆದರೆ ದಾವಣಗೆರೆಯಲ್ಲಿ ಕೆಲವು ಜವರೀ ಮತ್ತು ರಾಗಿ ಫಸಲ್ ಬಣಗುತಲಿದೆ.

ಕಟುವಾದ ಫಸಲ್‌ಗಳು.—ಭತ್ತ, ರಾಗಿ. ಜವರಿ, ನವಣೆ, ಸಾಮೆ, ಹುರಳಿ, ಅಡಿಕೆ. ಯಾಲಕ್ಕಿ.

ಜನಾರೋಗ್ಯ.—ಸಾಧಾರಣವಾಗಿ ಚನ್ನಾಗಿದೆ. ಉಖಾಲ್‌ಜುಲಾಬಿನಿಂದ ದಾವಣಗೆರೆ ತಾಲ್ಲೂಕಿನಲ್ಲಿ 11 ಮಂದಿ, ಹೊನ್ನಾಳಿ ತಾಲ್ಲೂಕಿನಲ್ಲಿ 8 ಮಂದಿ ಮೃತ ಪಟ್ಟರುವಂತೆ ರಿಪ್ಪೋರ್ಟು ಬಂದಿರುತ್ತೆ.

ಜಮ್ಮಿ.—ಈ ಮಾಹೆಯಲ್ಲಿ 668 ರೂಪಾಯಿ ಕಂದಾಯವುಳ್ಳ ಜಮ್ಮಿ ಸಾಗುವಳೀ ಬಗ್ಯೆ ತೆಗದುಕೊಳ್ಳಲ್ಪಟ್ಟಿದೆ.

ದಾರಣೆ.—ಯಥಾಸ್ಥಿತವಾಗಿದೆ.

ಪಿ. ಪಂಚನಾಥರಾವ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಮಳೆ.—ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಇದರಡೀ ಕಂಡಂತೆ ಮಳೆ ಅಳೆಯಲ್ಪಟ್ಟಿದೆ:

ತಾಲ್ಲೂಕುಗಳು.	ಇಂ॥	ಸೆಂ॥	ತಾಲ್ಲೂಕುಗಳು	ಇಂ॥	ಸೆ॥
ತರೀಕೆರೆ ..	2	25	ಹಾಸನ ..	1	52
ಕೊಪ್ಪ ..	0	90	ಮಂಜರಾಬಾದ ..	1	71
ಚಿಕ್ಕಮಗಳೂರು ..	4	10	ಬೇಲೂರು ..	0	58
ಕಡೂರು ..	2	14	ಅರಸೀಕೆರೆ ..	3	15
ಮೂಡಗೆರೆ ..	0	10	ಎಡೆಹಳ್ಳಿ ..	1	40

ಬೇರಾವಾದ ಬೀಜಗಳು.—ತರೀಕೆರೆ, ಚಿಕ್ಕಮಗಳೂರು, ಕಡೂರು, ಹಾಸನ, ಬೇಲೂರು ಮತ್ತು ಅರಕೀಕೆರೆ ತಾಲ್ಲೂಕ
ಚಿಕ್ಕಮಗಳೂರು ಮತ್ತು ಕಡೂರು ತಾಲ್ಲೂಕುಗಳಲ್ಲಿ ಬೆಳ್ಳುಳ್ಳಿ, ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಗನ್ನಾ, ಚಿಕ್ಕಮಗಳೂರು, ಕ
ಬೇಲೂರು ಮತ್ತು ಅರಕೀಕೆರೆ ತಾಲ್ಲೂಕುಗಳಲ್ಲಿ ಗೋಧಿ, ಚಿಕ್ಕಮಗಳೂರು, ಕಡೂರು ಮತ್ತು ಅರಕೀಕೆರೆ ತಾಲ್ಲೂಕುಗಳಲ್ಲಿ ಕೊತ್ತಂಬ
ಬೀಜ, ಕಡೂರು ತಾಲ್ಲೂಕಿನಲ್ಲಿ ಜವೆಗೋಧಿ, ಹಾಸನ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ಮೆಂಥ್ಯಾ.

ಈಟೂವಾದ ಪೈರುಗಳು.—ಕೊಪ್ಪ ಮತ್ತು ಮೂಡಗೆರೆ ತಾಲ್ಲೂಕುಗಳಲ್ಲಿ ಯಾಲಕ್ಕಿ, ಕಾಫಿ, ಮತ್ತು ಅಡಿಕೆ, ಚಿಕ್ಕಮಗಳೂರು, ಕಡೂರು, ಮೂಡಗೆರೆ ಹಾಸನ, ಮಂಜರಾಬಾದ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ಭತ್ತ, ಕಡೂರು ಮತ್ತು ಹಾಸನ ತಾಲ್ಲೂಕುಗಳೆಲ್ಲಿ ರಾಗಿ

ಪೈರುಗಳ ಸ್ಥಿತಿ ಸಾಧಾರಣವಾಗಿ ಚನ್ನಾಗಿದೆ.

ಕಾಲಸ್ಥಿತಿಯು ಚನ್ನಾಗಿಧೆ.

ಜನಾರೋಗ್ಯ.—ಸಾಧಾರಣವಾಗಿ ಚನ್ನಾಗಿದೆ, ಕೊಪ್ಪ, ತರೀಕೆರೆ ಮತ್ತು ಹಾಸನ ತಾಲ್ಲೂಕುಗಳಲ್ಲಿ ಜ್ವರ ವ್ಯಾಪಿಸಿ ಯಿಧೆ.

ಕಾಲ್ನಡಿ.—ಪಳ್ಳೀ ಸ್ಥಿತಿಯಲ್ಲಿದೆ ಈ ತಿಂಗಳಲ್ಲಿ 975 ಕಾಲ್ನಡಿ ನಷ್ಟವಾದಂತೆ ರಿಪೋರ್ಟಾಗಿಧೆ, ಕಳೆದ ತಿಂಗಳಲ್ಲಿ 1022 ಕಾಲ್ನಡಿ ನಷ್ಟವಾಗಿರುತ್ತೆ.

ಜಮ್ಮಾ.—1,170—2—0 ರೂಪಾಯಿ ಕಂದಾಯಕ್ಕಿಳ್ಳ ಜಮ್ಮಾ ಸಾಗುವಳೀಬಗ್ಗೆ ತೆಗದುಕೊಳ್ಳಲ್ಪಟ್ಟಿದೆ. ರಾಜೀನಾಮೆ ಯಾವದೂ ಬರಲಿಲ್ಲವು.

ದಾರಣೆ,—ಯಥಾ ಸ್ಥಿತಿಯಾಗಿಧೆ.

ಮಹಮ್ಮದಲ್ಲೀ, ಕೆ. ಬಿ.,
ಅಫಿಷಿಯೇಟಿಂಗ್ ಡೆಪ್ಯೂಟಿ ಕಮ್ಮಿಷನರ್.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಎಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥ ವಾಗಿ ಗವರ್ಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಗಳು ತೆಗದುಕೊಳ್ಳುವ ಯಾವ ಮನುಷ್ಯ ನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗಡಿನ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಬಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಬಂದು ಪೌಂವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ ಯೂರೋಪಿಯರ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ ಸದರೀ ಕಿಮ್ಮತ್ತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬೀಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಬಂದು ಪೌಂ ಡಬ್ಬಿಗೆ ಹನ್ನೆರಡ ಆಣೆ ಹಾಸಲೂ ಕೊಡಬೇಕು.

ಕ್ರಿಸ್ಟಲ್ಲೈಸ್ಡ್ ಸಿಂಕೋನಾ ಫೆಬ್ರಿಫ್ಯೂಜ್.

ಗವರ್ಮೆಂಟ್ ಕೋಠಿಯಲ್ಲಿ ಕೆಂಪುವರ್ಣದ ಸಿಂಕೋನಾ ಚಟ್ಟಿಯಿಂದ ತಯಾರ್ ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧಿಯಾ ದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲ್ಲೈಸ್ಡ್ ಅಲ್ಲದ ಫೈಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿಧೆ, ಇದನ್ನು ಕಲ್‌ಕತ್ತೆಬಳಿ ಸೀಬ್‌ಪೂರ್ ಸವಿಾಪದಲ್ಲಿ ರಾಯಲ್ ಬೊಟಾನಿಕ್ ಗಾರ್ಡನ್ ಸೂಪರ್‌ಟೆಂಡೆಂಟರಿಂದ ಗವರ್ಮೆಂಟ್ ಆಫೀಸರ್‌ಗಳು ಸರ್ಕಾರಿಯಾ ದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಬಂದು ಸಲಕ್ಕೆ ಇಪ್ಪತ್ತು ಪೌಂಡ್ ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳು ವರು ನಗದೀಗಾಗೆಯೇ ಪೌಂಡ್ ಬಂದಕ್ಕೆ 24 ರೂಪಾಯಿಗಳ ದರ ಪ್ರಕಾರ, ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕ್ ಗಾರ್ಡನ್ ಸೂಪರ್‌ಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್ ಬಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯರ್ ಮತ್ತು ನೇಟಿವ್ ಡಗ್ಗಿಸ್ಟ್‌ಗಳು ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ.

Mysore Government Press, Bangalore.—1884.